# ಚಂಪಾವತ್‌ನ ದೀಪ

■ ಪ್ರವೀಣ ಕುಲಕರ್ಣಿ

'ತೇರಿ ಮಿಟ್ಟಿ ಮೇ ಮಿಲ್ ಜಾವಾ/ ಗುಲ್ ಬನ್‌ಕೆ ಮೇ ಖಿಲ್ ಜಾವಾ...' – ಆ ಯುವ ಗಾಯಕ ಹಾಡಲು ನಿಂತನೆಂದರೆ ಉತ್ತರಾಖಂಡದ ಚಂಪಾವತ್ ನದಿ ನೀರಿನಲ್ಲಿ ಒದ್ದೆಯಾದ ಆವೆಮಣ್ಣಿನ ಘಮಲು ಮೂಗಿಗೆ ಬಂದು ಅಡರುತ್ತದೆ. ಆ ಹುಡುಗನ ಧ್ವನಿಯಲ್ಲಿರುವ ಮಾಧುರ್ಯವೇ ಅಂತಹದ್ದು. ಚಂಪಾವತ್ ಪಟ್ಟಣದಿಂದಲೇ ಬಂದಿರುವ ಆತನ ಹೆಸರು ಪವನ್‌ದೀಪ್ ರಾಜನ್ ಎಂದು. 'ಇಂಡಿಯನ್ ಐಡಲ್' ರಿಯಾಲಿಟಿ ಶೋನ 12ನೇ ಆವೃತ್ತಿಯಲ್ಲಿ ವಿಜೇತನಾಗಿ ಹೊರಹೊಮ್ಮಿರುವ ಪವನ್, 25 ಲಕ್ಷ ರೂಪಾಯಿ ಬಹುಮಾನವನ್ನು ಜೇಬಿಗಿಳಿಸಿದ್ದಾನೆ. ಅದರೊಂದಿಗೆ ಕಾಣಿಕೆಯಾಗಿ ಬಂದ ಸ್ವಿಫ್ಟ್ ಕಾರಿನೊಂದಿಗೆ ಊರಿಗೆ ಹಿಂದಿರುಗಿದ್ದಾನೆ. ಹಲವು ಸಿನಿಮಾಗಳಲ್ಲಿ ಹಿನ್ನೆಲೆ ಗಾಯನದ ಒಪ್ಪಂದ ಪತ್ರಗಳನ್ನೂ ಜತೆಗೆ ಒಯ್ದಿದ್ದಾನೆ.

ಪವನ್‌ಗೆ ಸರಿಸಮವಾಗಿ ಸವಾಲು ಒಡ್ಡಿದವಳು ಪಶ್ಚಿಮ ಬಂಗಾಲದ ಅರುಣಿತಾ ಕಾಂಜಿಲಾಲ್. ಶಾಸ್ತ್ರೀಯ ಸಂಗೀತದಲ್ಲಿ ಮೇರುಸಾಧನೆ ಮಾಡಿರುವ ಈ ಹುಡುಗಿ, ಲತಾ ದೀದಿಯಂತೆ ಸೊಗಸಾಗಿ ಹಾಡಿದರೂ ಪ್ರಶಸ್ತಿ ಮಾತ್ರ ಪವನ್ ಪಾಲಾಗಿದೆ. ಆತ ಪ್ರಶಸ್ತಿಯನ್ನಷ್ಟೇ ಗೆದ್ದಿಲ್ಲ. ಅರುಣಿತಾಳ ಹೃದಯವನ್ನೂ ಗೆದ್ದಿದ್ದಾನೆ. ರಿಯಾಲಿಟಿ ಶೋದ ಉದ್ದಕ್ಕೂ ಇವರಿಬ್ಬರ ಪ್ರೇಮ ನಿವೇದನೆ ಕುರಿತು ಚರ್ಚೆಯೋ ಚರ್ಚೆ. ಪವನ್ ಗಾಯನದಲ್ಲಿ ಮಾತ್ರವಲ್ಲದೆ ವಾದನದಲ್ಲೂ ಸಿದ್ಧಹಸ್ತ. ಆತ ಪಿಯಾನೊ ನುಡಿಸಬಲ್ಲ, ತಬಲಾ ಬಾರಿಸಬಲ್ಲ, ಹಾರ್ಮೋನಿಯಂ, ಡ್ರಮ್, ಗಿಟಾರ್, ಢೋಲಕ್, ಮೌತ್ ಆರ್ಗನ್ ಮೊದಲಾದ ವಾದನಗಳನ್ನು ನುಡಿಸುವುದು ಕೂಡ ಆತನಿಗೆ ಗೊತ್ತು. ಸೋಜಿಗದ ಸಂಗತಿ ಎಂದರೆ ಆತ ಎಲ್ಲಿಯೂ ಸಂಗೀತ ಪಾಠವನ್ನು ಹೇಳಿಸಿಕೊಂಡಿಲ್ಲ. ನಿರಂತರ ಅಭ್ಯಾಸದಿಂದ ಸಾಧಿಸಿದ ಸಿದ್ಧಿ ಅದು.

'ಶಾಯದ್ ಕಭಿ ನ ಕೆಹ್ ಸಕು ಮೈ ತುಮ್‌ಕೊ', 'ತೇರೆ ನಾಮ್', 'ಹಮಾರಿ ಅಧುರಿ ಕಹಾನಿ' 'ಓ ಸಾಥಿ ರೇ' ಮೊದಲಾದ ಗೀತೆಗಳನ್ನು ಆತ ಹಾಡಲು ನಿಂತನೆಂದರೆ ಮೈಮೇಲಿನ ರೋಮಗಳು ನೆಟ್ಟಗಾಗಿ ನಿಲ್ಲಬೇಕು. 'ಇಂಡಿಯನ್ ಐಡಲ್'ನಲ್ಲಿ ಆತ ಹಾಡಿದ ಹಾಡುಗಳ ತುಣುಕುಗಳನ್ನು 12 ಕೋಟಿ ಜನ ವೀಕ್ಷಿಸಿರುವುದು ಆತನ ಗಾಯನದ ಜನಪ್ರಿಯತೆಗೆ ಸಾಕ್ಷಿ. ಯಾರು ಎಷ್ಟೇ ಹೊಗಳಿದರೂ ಅದರಿಂದ ಉಬ್ಬದೆ, ಅಬ್ಬರಿಸದೆ ವಿನಮ್ರ ಭಾವದಿಂದ ನಮಿಸುವ ಪವನ್, ಹಾಡಿನಿಂದ ಮಾತ್ರವಲ್ಲ, ವ್ಯಕ್ತಿತ್ವದಿಂದಲೂ ದೇಶದ ಜನರ ಹೃದಯವನ್ನು ಗೆದ್ದಿದ್ದಾನೆ. ಆಶಾ ಭೋಸಲೆ, ಧರ್ಮೇಂದ್ರ, ಜಿತೇಂದ್ರ, ರೇಖಾ, ಕವಿತಾ ಕೃಷ್ಣಮೂರ್ತಿ, ಬಪ್ಪಿ ಲಹರಿ, ಕರಣ್ ಜೋಹರ್, ಕುಮಾರ್ ಸಾನು ಅವರಂತಹ ದಿಗ್ಗಜರು ಈಗ ಆತನ ಅಭಿಮಾನಿಗಳಾಗಿದ್ದಾರೆ!

ಚಂಪಾವತ್ ಹೇಳಿ ಕೇಳಿ ಹಿಮಾಲಯದ ತಪ್ಪಲಿನಲ್ಲಿರುವ ಪ್ರದೇಶ. ಪ್ರಾಕೃತಿಕ ಸೊಬಗಿಗೆ ಹೆಸರಾಗಿರುವ ಕುಮಾಂವ್‌ನ ಭಾಗ. ಕುಮಾಂವ್ ಅಂದರೆ ಗೊತ್ತು ತಾನೇ? ಹುಲಿಗಳಿಗೆ ಪ್ರಸಿದ್ಧವಾದ ತಾಣವಿದು. ಜಿಮ್ ಕಾರ್ಬೆಟ್‌ನ ಹೆಸರು ಕೇಳಿದವರಿಗೆ, ಆತನ ಬೇಟೆಯ ಕಥೆಗಳನ್ನು ಓದಿದವರಿಗೆ ಕುಮಾಂವ್‌ನ ಪರಿಚಯ ಇದ್ದೇ ಇರುತ್ತದೆ. ಥರಾವರಿ ಪಕ್ಷಿಗಳಿಗೂ ಹೂವುಗಳಿಗೂ ಹೆಸರಾದ ತಾಣ ಇದು. ಇಂತಹ ಮಣ್ಣಿನಲ್ಲಿ ಅರಳಿರುವ ಪವನ್ ಪ್ರತಿಭೆಯಲ್ಲಿ ನೆಲದ ಸತ್ವವೂ ಸೇರಿದಂತಿದೆ. ಸ್ಪರ್ಧೆಗೆ ಆತ ಆ ಪುಟ್ಟ ಪಟ್ಟಣದಿಂದ ಮುಂಬೈಗೆ ಬರುವಾಗ ಊರಿನ ಜನರು ಹೇಳಿದ ಮಾತು: 'ವಾಪಸ್ ಮತ್ ಆನಾ' (ವಾಪಸ್ ಬರಬೇಡ)! ಅಂದರೆ ಎಡಿಷನ್‌ನಲ್ಲಿ ಗೆದ್ದು, ಅಲ್ಲಿಯೇ ಉಳಿದು ಪ್ರಶಸ್ತಿ ಜಯಿಸಿಯೇ ಬರಬೇಕು ಎನ್ನುವ ಹಾರೈಕೆ. ಚಂಪಾವತ್ ಜನರ ಅಪೇಕ್ಷೆಯಂತೆ ಪ್ರಶಸ್ತಿ ಗೆದ್ದುಕೊಂಡೇ ಆತ ವಾಪಸ್ ಆಗಿದ್ದಾನೆ.

ಪ್ರಶಸ್ತಿ ಗೆದ್ದಾಗ ಆತ ಹೇಳಿದ ಮಾತುಗಳು ಆತನಲ್ಲಿ ಪ್ರತಿಭೆಯೊಂದಿಗೆ ವಿನಯವೂ ಮೇಳೈಸಿರುವುದಕ್ಕೆ ಸಾಕ್ಷಿ. 'ಟ್ರೋಫಿ ಕೈಯಲ್ಲಿರುವುದು ಭರಿಸಲಾಗದಷ್ಟು ಆನಂದ ನೀಡಿರುವುದೇನೋ ನಿಜ. ಆದರೆ, ಪ್ರಶಸ್ತಿಯ ಅಂತಿಮ ಸುತ್ತಿನಲ್ಲಿದ್ದ ಎಲ್ಲರೂ ನನ್ನ ಆತ್ಮೀಯ ಗೆಳೆಯರು. ಅವರೆಲ್ಲರೂ ಪ್ರಶಸ್ತಿ ಗೆಲ್ಲಬೇಕೆಂಬ ಅಪೇಕ್ಷೆ ನನ್ನಲ್ಲಿತ್ತು. ಈ ಟ್ರೋಫಿಯನ್ನು ನಾನು ಅವರೆಲ್ಲರಿಗೆ ಅರ್ಪಿಸುತ್ತಿದ್ದೇನೆ. ಎಲ್ಲರೂ ಮಹಾನ್ ಪ್ರತಿಭಾನ್ವಿತರು. ಅವರ ಭವಿಷ್ಯ ಉಜ್ವಲವಾಗಲಿ' ಎಂದು ಹಾರೈಸಿದ್ದಾನೆ ಪವನ್. ಸ್ಪರ್ಧೆ ನಡೆಯುವಾಗ ತನ್ನ ತವರು ರಾಜ್ಯದಲ್ಲಿ ಪ್ರಾಕೃತಿಕ ವಿಕೋಪ ಸಂಭವಿಸಿದ ಸಂದರ್ಭದಲ್ಲಿ ಸಂತ್ರಸ್ತರ ಪರವಾಗಿ ಆತ ಮರುಗಿದ್ದ. ಉತ್ತರಾಖಂಡದ ಹೆಮ್ಮೆಯ ಪ್ರತೀಕವಾದ ಟೋಪಿಯನ್ನು ಧರಿಸಿಯೇ ಆತ ಹಾಡಲು ಬರುತ್ತಿದ್ದ.



ಪ್ರಶಸ್ತಿ ಸುತ್ತಿನಲ್ಲಿ ನಿನ್ನ ಪ್ರೀತಿಯ ಗೆಳತಿ ಅರುಣಿತಾ ಕೂಡ ಇದ್ದಳಲ್ಲ? ನೀನು ಟ್ರೋಫಿ ಗೆದ್ದಾಗ ಅವಳ ಮೊದಲ ಪ್ರತಿಕ್ರಿಯೆ ಏನಿತ್ತು ಎಂಬ ಪ್ರಶ್ನೆಯನ್ನು ಪತ್ರಕರ್ತರು ಪವನ್ ಮುಂದೆ ಇಟ್ಟಿದ್ದರು. 'ಅಭಿನಂದನೆಗಳು ಎಂದು ಆಕೆ ಹೇಳಿದಳು. ತಾನೇ ಪ್ರಶಸ್ತಿ ಗೆದ್ದಷ್ಟು ಸಂಭ್ರಮ ಅವಳಲ್ಲಿತ್ತು' ಎಂದು ಆತ ಉತ್ತರ ಕೊಟ್ಟಿದ್ದ. ಪವನ್ ಪಾಲಿಗೆ ಇದು ಎರಡನೇ ಪ್ರಶಸ್ತಿ. 2015ರಲ್ಲೂ ಆತ ರಿಯಾಲಿಟಿ ಶೋನಲ್ಲಿ ಜಯಶಾಲಿಯಾಗಿದ್ದ. ಮರಾಠಿ ಚಿತ್ರರಂಗದಲ್ಲೂ ಹಿನ್ನೆಲೆ ಗಾಯಕನಾಗಿ ಗುರ್ತಿಸಿಕೊಂಡಿರುವ ಪವನ್ ಗಾಯನದ 'ಗಾಳಿ' ಈಗ ಬಾಲಿವುಡ್‌ನಲ್ಲೂ ಬೀಸತೊಡಗಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65